

بسم اللهِ الرّحمٰن الرّحيم

# ಬಾದ್‌ಶಾ ತೇರೆ ಕಪಡೋಂಸೆ ಬರ್‌ಕತ್ ಡೂಂಡೇಂಗೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **15–01–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ತನ್ನ ಸ್ನೇಹಿತರ (ವಲಿಗಳ) ಮತ್ತು ಸಾತ್ವಿಕರಾಗಿರುವವರ ಮಕ್ಕಳಿಗೂ ಅವರ ಮೊಮ್ಮಕ್ಕಳಿಗೂ ಸಂತಾನ ಪರಂಪರೆಗೂ ಸಂರಕ್ಷಣೆ ನೀಡುತ್ತಾನೆ. ಆದರೆ ಶರತ್ತೇನೆಂದರೆ ಅವರ ಮಕ್ಕಳು ಮತ್ತು ಸಂತಾನ ಸಹ ಒಳಿತಿನಲ್ಲಿ ಸ್ಥಿರವಾಗಿ ನಿಲ್ಲುವವರಾಗಿರಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಉದಾಹರಣೆ ನೀಡುತ್ತಾ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪ್ರವಾದಿತ್ವದ ಆರಂಭದ ಕಾಲದಲ್ಲಿ ತನ್ನ ಕುಟುಂಬದವರಿಗೆ ಸಂದೇಶ ತಲಪಿಸಲು ಅವರನ್ನು ಜಮಾಯಿಸಿದರು. ಅವರು ಸಂದೇಶ ತಲಪಿಸಿದಾಗ ಅಲ್ಲಿ ಸೇರಿದ್ದವರು ಮೌನವನ್ನು ಅವಲಂಬಿಸಿದರು. ಯಾರೂ ಮಾತನಾಡಲಿಲ್ಲ. ಕೊನೆಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಎದ್ದು ನಿಂತು ಹೇಳಿದರು: ಇಲ್ಲಿ ಜಮಾಯಿಸಿದವರಲ್ಲಿ ನಾನು ಎಲ್ಲರಿಗಿಂತ ಕಡಿಮೆ ಪ್ರಾಯದವನಾಗಿದ್ದೇನೆ. ಆದರೆ ನಾನು ತಮ್ಮೊಂದಿಗೆ ಹೇಳಲು ಬಯಸುವುದೇನೆಂದರೆ, ನೀವು ಹೇಳಿದ ವಿಷಯಕ್ಕೆ ಸಂಬಂಧಿಸಿ ನಿಮಗೆ ಬೆಂಬಲ ನೀಡಲು ನಾನು ಸಿದ್ಧನಾಗಿದ್ದೇನೆ. ನಾನು ಯಾವಾಗಲೂ ನಿಮ್ಮೊಂದಿಗಿರುವೆನೆಂದು ಪ್ರತಿಜ್ಞೆ ಮಾಡುತ್ತೇನೆ.

ಅನಂತರ ಮಕ್ಕದಲ್ಲಿ ವಿರೋಧ ಬಹಳ ಹೆಚ್ಚಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ವಲಸೆ ಹೋಗಬೇಕಾಯಿತು. ಆ ವೇಳೆಯಲ್ಲಿ ಹಝ್ರತ್ ಅಲಿ(ರ)ರವರಿಗೆ ಬಲಿದಾನ ನೀಡುವ ಭಾಗ್ಯವನ್ನು ಅಲ್ಲಾಹನು ನೀಡಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ(ರ)ರವರನ್ನು ತನ್ನ ಹಾಸಿಗೆಯಲ್ಲಿ ಮಲಗಿಕೊಳ್ಳಲು ಹೇಳಿದರು: ನೀನು ಇಲ್ಲಿಯೇ ಮಲಗಿರು. ಶತ್ರುಗಳು ನಾನೇ ಇಲ್ಲಿ ಮಲಗಿದ್ದೇನೆಂದು ಭಾವಿಸಲಿ ಎಂದು ಹೇಳಿದರು. ಆಗ ಹಝ್ರತ್ ಅಲಿ(ರ) ಹೇಳಲಿಲ್ಲ– 'ಓ ಅಲ್ಲಾಹನ ಸಂದೇಶವಾಹಕರೇ, ಶತ್ರುಗಳು ಮನೆಯನ್ನು ಸುತ್ತುವರಿದಿದ್ದಾರೆ. ಬೆಳಗ್ಗೆ ಅವರಿಗೆ ನೀವು ಇಲ್ಲಿ ಇಲ್ಲವೆಂದು ತಿಳಿದರೆ ಅವರು ನನ್ನನ್ನು ಕೊಲ್ಲುವರು' ಎಂದು ಹೇಳಲಿಲ್ಲ. ಹಝ್ರತ್ ಅಲಿ(ರ) ಹಾಗೆ ಹೇಳದೆ ಸಮಾಧಾನದಿಂದ ಮಲಗಿ ನಿದ್ರಿಸಿದರು. ಬೆಳಗ್ಗೆ ಅವಿಶ್ವಾಸಿಗಳಿಗೆ ಈ ವಿಷಯ ತಿಳಿದಾಗ ಅವರು ಹಝ್ರತ್ ಅಲಿಯವರಿಗೆ ಬಹಳ ಹೊಡೆದರು. ಆದರೆ ಅಷ್ಟರೊಳಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಹೊರಗೆ ಹೋಗಿದ್ದರು. ಹಝ್ರತ್ ಅಲಿ(ರ) ಮಾಡಿದ ಈ ತ್ಯಾಗದ ಕಾರಣ ಅನಂತರ ಅವರಿಗೆ ಅಲ್ಲಾಹನು ಬಹಳ ಅನುಗ್ರಹ ದಯಪಾಲಿಸಿದನು. ಅವರ ತ್ಯಾಗದ ಕಾರಣ ಅವರಿಗೆ ಎಷ್ಟೆಲ್ಲಾ ಅನುಗ್ರಹಗಳು ದೊರೆಯಲಿವೆ ಎಂದು ಅಲ್ಲಾಹನಿಗೆ ಮಾತ್ರ ತಿಳಿದಿತ್ತು. ಹಝ್ರತ್ ಅಲಿ(ರ)ರವರಿಗೆ ಮಾತ್ರವಲ್ಲ ಒಳಿತುಗಳಲ್ಲಿ ಸ್ಥಿರವಾಗಿದ್ದ ಅವರ ಮಕ್ಕಳಿಗೂ ಅವರ ಸಂತಾನ ಪರಂಪರೆಗೂ ಅಲ್ಲಾಹನು ಗೌರವ ದಯಪಾಲಿಸಿದನು. ಹಝ್ರತ್ ಅಲಿ(ರ)ರವರಿಗೆ ದೊರೆತ ಪ್ರಥಮ ಅನುಗ್ರಹ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಳಿಯನಾದುದಾಗಿದೆ. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ(ರ)ರವರು ವಿವಿಧ ಸಂದರ್ಭಗಳಲ್ಲಿ ಮಾಡಿದ ವಿವಿಧ ಕೆಲಸಗಳಿಗೋಸ್ಕರ ಅವರನ್ನು ಬಹಳ ಹೊಗಳಿದ್ದರು. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಯುದ್ಧಕ್ಕೆ ಹೊರಟಾಗ ಹಝ್ರತ್ ಅಲಿ(ರ)ರವರು ಮದೀನದಲ್ಲಿರಬೇಕು ಎಂದು ಆಜ್ಞೆ ನೀಡಿದ್ದರು. ಆಗ ಹಝ್ರತ್ ಅಲಿ(ರ) ಹೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ, ತಾವು ನನ್ನನ್ನು ಮಹಿಳೆಯರ ಮತ್ತು ಮಕ್ಕಳ ಜೊತೆ ಬಿಟ್ಟು ಹೋಗುತ್ತಿರುವಿರೇನು?" ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹಝ್ರತ್ ಹಾರೂನರಿಗೆ ಹಝ್ರತ್ ಮೂಸಾರೊಂದಿಗೆ ಇದ್ದ ಸಂಬಂಧದ ಹಾಗೆ ನನ್ನೊಂದಿಗೆ ಸಂಬಂಧ ಹೊಂದಲು ನೀವು ಬಯಸುವುದಿಲ್ಲವೇ?" ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಹಝ್ರತ್ ಹಾರೂನ್ ಅಲೈಹಿಸ್ಸಲಾರನ್ನು ತನ್ನ ಜನಾಂಗದ ಜೊತೆ ಇರಿಸಿ ಹೋಗಿದ್ದರು. ಅದರಿಂದ ಹಝ್ರತ್ ಹಾರೂನರ ಗೌರವಕ್ಕೆ ಕುಂದುಂಟಾಗಲಿಲ್ಲ. ಹಝ್ರತ್ ಅಲಿ(ರ)ರವರಿಗೆ ಅಲ್ಲಾಹನು ಹೇಗೆ ಗೌರವ ನೀಡಿದನೆಂದರೆ ಅವರಿಗೆ ಮಾತ್ರವಲ್ಲ ಅವರ ಸಂತಾನ ಪರಂಪರೆಯಲ್ಲಿ ಇಸ್ಲಾಮಿನ ಬಹುತೇಕ ಸಂತರು ಜನಿಸಿದರು. ಆ ಸಂತರಿಗೆ ಅಲ್ಲಾಹನು ದಿವ್ಯ ದೃಷ್ಟಾಂತಗಳ ಮೂಲಕ ತನ್ನ ಸಹಾಯವನ್ನು ನೀಡಿದನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿರುವುದನ್ನು ನಾನು ಕೇಳಿದ್ದೇನೆ: ದೊರೆ ಹಾರೂನುರ್ರಶೀದ್ ಇಮಾಮ್ ಮೂಸಾ ರಿಝಾರನ್ನು ಯಾವುದೋ ಕಾರಣದಿಂದ ಬಂಧಿಸಿದ್ದರು. ಅವರ ಕೈಗಳನ್ನೂ ಕಾಲುಗಳನ್ನೂ ಹಗ್ಗದಿಂದ ಕಟ್ಟಲಾಗಿತ್ತು. ದೊರೆ ಸುಖವಾಗಿ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಸ್ವಪ್ನದಲ್ಲಿ ಹೀಗೆ ಕಂಡರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದ್ದಾರೆ. ಅವರ ಮುಖ ಕೋಪ ಭರಿತವಾಗಿ ಕಾಣುತ್ತಿತ್ತು. ಅವರು ಹೇಳಿದರು: ಹಾರೂನುರ್ರಶೀದ್, ನೀನು ನಮ್ಮನ್ನು ಪ್ರೀತಿಸುವುದಾಗಿ ಹೇಳುತ್ತಿರುವೆ ಆದರೆ ನಿನಗೆ ನಾಚಿಕೆ ಆಗುವುದಿಲ್ಲವೇ ನೀನು ಸುಖವಾಗಿ ಹಾಸಿಗೆಯ ಮೆತ್ತೆಯಲ್ಲಿ ನಿದ್ರಿಸುತ್ತಿರುವಾಗ ನಮ್ಮ ಮಗ ಕಠಿಣ ಸೆರೆಯಲ್ಲಿ ಕೈ ಕಾಲು ಕಟ್ಟಲ್ಪಟ್ಟು ಸೆರೆಮನೆಯಲ್ಲಿ ಬಿದ್ದಿದ್ದಾನೆ. ಸ್ವಪ್ನದಲ್ಲಿ ಈ ದೃಶ್ಯ ಕಂಡು ಹಾರೂನುರ್ರಶೀದ್ ಗಾಬರಿಗೊಂಡರು. ಆಗಲೇ ಸೆರೆಮನೆಗೆ ಹೋಗಿ ತನ್ನ ಕೈಗಳಿಂದ ಇಮಾಮ್ ಮೂಸಾ ರಿಝಾರ ಕೈ ಕಾಲುಗಳಿಗೆ ಬಿಗಿಯಲಾಗಿದ್ದ ಹಗ್ಗದ ಕಟ್ಟು ಬಿಚ್ಚಿದರು. ಆಗ ಇಮಾಮ್ ಸಾಹೇಬರು ಕೇಳಿದರು: ನೀವು ನನ್ನನ್ನು ಅತಿಯಾಗಿ ವಿರೋಧಿಸುತ್ತಿದ್ದಿರಿ. ಈಗ ನೀವು ನನ್ನನ್ನು ಬಿಡುಗಡೆ ಮಾಡಲು ಇಲ್ಲಿಗೆ ಬಂದ ಕಾರಣವೇನು? ಹಾರೂನುರ್ರಶೀದ್ ತನ್ನ ಸ್ವಪ್ನದ ಬಗ್ಗೆ ಹೇಳಿ "ನಾನು ತಮ್ಮಿಂದ ಕ್ಷಮೆ ಬೇಡಿಕೊಳ್ಳುತ್ತೇನೆ. ನನಗೆ ವಾಸ್ತವಿಕ ವಿಷಯ ತಿಳಿದಿರಲಿಲ್ಲ" ಎಂದು ಹೇಳಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನೋಡಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಕಾಲದಿಂದ ಹಾರೂನುರ್ರಶೀದರ ಕಾಲ ಎಷ್ಟು ದೂರವಿತ್ತು. ನಾವು ಹಲವು ದೊರೆಗಳ ಸಂತಾನಗಳನ್ನು ನೋಡಿದ್ದೇವೆ. ಅವರು ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಇನ್ನೊಂದು ಕಡೆ ಹಝ್ರತ್ ಅಲಿಯವರ ಸಂತಾನವನ್ನು ನೋಡಿರಿ. ಎಷ್ಟೋ ಪೀಳಿಗೆಗಳ ನಂತರ ಅಲ್ಲಾಹನು ಒಬ್ಬ ದೊರೆಗೆ ಸ್ವಪ್ನ ಮೂಲಕ ಎಚ್ಚರಿಕೆ ನೀಡುತ್ತಾನೆ. ಮತ್ತು ಅವರೊಂದಿಗೆ ಉತ್ತಮವಾಗಿ ವರ್ತಿಸುವಂತೆ ತಾಕೀತು ಮಾಡುತ್ತಾನೆ. ಹಝ್ರತ್ ಅಲಿ(ರ)ರವರಿಗೆ ತನಗೆ ದೊರೆಯಲಿದ್ದ ಗೌರವದ ಬಗ್ಗೆ ತಿಳಿದಿದ್ದರೆ ಮತ್ತು ಗೌರವ

ಪಡೆಯಲಿಕ್ಕಾಗಿ ಅವರು ಇಸ್ಲಾಮ್ ಸ್ವೀಕರಿಸಿದ್ದರೆ, ಅಂತಹ ಸ್ಥಿತಿಯಲ್ಲಿ ಅವರ ವಿಶ್ವಾಸ ಒಂದು ವ್ಯಾಪಾರದ ಹಾಗಾಗುತ್ತಿತ್ತು. ಆಗ ಅವರು ಯಾವುದೇ ಬಹುಮಾನ ಗಳಿಸುತ್ತಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ವಲಿ(ಸಂತರ) ಬಗ್ಗೆ ವಿವರಿಸುತ್ತಾ ಹೇಳಿದರು: ಆ ಸಂತ ಒಂದು ಹಡಗಿನಲ್ಲಿ ಸಂಚರಿಸುತ್ತಿದ್ದರು. ಸಮುದ್ರದಲ್ಲಿ ತೂಫಾನ್ ಪ್ರಾರಂಭವಾಯಿತು. ಹಡಗು ಮುಳುಗಿ ಹೋಗುವಂತೆ ತೋರುತ್ತಿತ್ತು. ಆಗ ಆ ಸಂತರು ಮಾಡಿದ ಪ್ರಾರ್ಥನೆಯ ಫಲವಾಗಿ ಎಲ್ಲರೂ ರಕ್ಷಿಸಲ್ಪಟ್ಟರು. ಪ್ರಾರ್ಥಿಸುವಾಗ ಆ ಸಂತರಿಗೆ ಅಲ್ಲಾಹನು, "ನಿನಗೋಸ್ಕರವಾಗಿ ಎಲ್ಲರನ್ನೂ ರಕ್ಷಿಸಲಾಗಿದೆ" ಎಂದು ಇಲ್‌ಹಾಮ್ ಅವತೀರ್ಣ ಗೊಳಿಸಿದನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನೋಡಿರಿ ಹೀಗೆಲ್ಲಾ ಆಗುವುದು ಕೇವಲ ಬಾಯಿ ಮಾತಿನಿಂದಲ್ಲ. ಅದಕ್ಕೋಸ್ಕರ ಕಷ್ಟ ಪಡಬೇಕಾಗುತ್ತದೆ. ಅಲ್ಲಾಹನ ಜೊತೆ ಸಂಬಂಧ ಸ್ಥಾಪಿಸಬೇಕಾಗುತ್ತದೆ. ಸತ್ಕರ್ಮಗಳನ್ನು ಜಾರಿಯಲ್ಲಿರಿಸಬೇಕಾಗುತ್ತದೆ. ತಮ್ಮ ತಂದೆ ತಾತಂದಿರ ಒಳಿತುಗಳನ್ನು ಮುಂದುವರಿಸಬೇಕಾಗುತ್ತದೆ. ಒಳ್ಳೆಯವರ ಸಂತಾನ, ಸಂತರ ಸಂತಾನ, ಹಿರಿಯರ ಸಂತಾನ ಇವೆಲ್ಲಾ ಪ್ರಯೋಜನಕರವಾಗುವುದು ಮನುಷ್ಯನು ಸ್ವತಃ ಒಳಿತನ್ನು ಮಾಡುವಾಗ ಮತ್ತು ಅಲ್ಲಾಹನೊಂದಿಗೆ ಸಂಬಂಧ ಹೊಂದುವಾಗ ಮಾತ್ರವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ ಕೆಲವು ವಿಷಯಗಳನ್ನು ಸಹ ನಾನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಾಜಮಾಅತ್ (ಸಾಮೂಹಿಕ) ನಮಾಝ್ ಬಗ್ಗೆ ಎಂತಹ ಕಾಳಜಿ ಇತ್ತೆಂದರೆ, ಅವರಿಗೆ ಅಸ್ವಸ್ಥತೆಯ ಕಾರಣ ಮಸ್‌ಜಿದ್‌ಗೆ ಹೋಗಲು ಸಾಧ್ಯವಾಗದ ಸಂದರ್ಭದಲ್ಲಿ ಮನೆಯಲ್ಲಿಯೇ ನಮ್ಮ ತಾಯಿ ಅಥವಾ ಮಕ್ಕಳನ್ನು ಸೇರಿಸಿಕೊಂಡು ನಮಾಝುನ್ನು ಬಾಜಮಾಅತಾಗಿ ಅನುಷ್ಠಿಸುತ್ತಿದ್ದರು ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಾಜಮಾಅತ್ ನಮಾಝ್ ಅನುಷ್ಠಿಸುವ ಮಹತ್ವದ ಬಗ್ಗೆ ಹೀಗೆ ಹೇಳುತ್ತಾರೆ: ಎಲ್ಲ ಮನುಷ್ಯರನ್ನು ಒಂದೇ ಶರೀರದ ಹಾಗೆ ಮಾಡಲು ಅಲ್ಲಾಹನು ಇಚ್ಛಿಸುತ್ತಾನೆ. ಇದರ ಹೆಸರು **ವಹ್‌ದತೆ ಜಮ್‌ಹೂರಿ** ಎಂದಾಗಿದೆ. ಧರ್ಮದ ಉದ್ದೇಶ ಲಕ್ಷ್ಯ ಇದೇ ಆಗಿದೆ. ತಸ್‌ಬೀಹ್ ಮಾಲೆಯ (ಜಪಸರದ) ಮಣಿಗಳ ಹಾಗೆ ಒಂದು ದಾರದಲ್ಲಿ ಎಲ್ಲರೂ ಪೋಣಿಸಲ್ಪಡಬೇಕು. ಜನರನ್ನು ಒಂದಾಗಿ ಮಾಡುವುದೇ ನಿಜವಾದ ಧರ್ಮವಾಗಿದೆ. ನಮಾಝುನ್ನು ಸಾಮೂಹಿಕವಾಗಿ ಅನುಷ್ಠಿಸುವುದು ಈ ಏಕತೆ ಸ್ಥಾಪಿಸಲಿಕ್ಕಾಗಿದೆ. ನಮಾಝ್ ಒಟ್ಟಿಗೆ ಅನುಷ್ಠಿಸುವವರು ಒಂದು ಶರೀರದ ಹಾಗೆ ಗಣಿಸಲ್ಪಡುವರು. ನಮಾಝ್‌ನಲ್ಲಿ ಸಾಲಾಗಿ ಪರಸ್ಪರ ತಾಗಿಕೊಂಡು ನಿಲ್ಲುವ ಆಜ್ಞೆ ನೀಡಿರುವುದು ಏಕೆಂದರೆ ಯಾರಲ್ಲಿ ಹೆಚ್ಚು ಪ್ರಕಾಶ ಇದೆಯೋ ಅದು ಬಲಹೀನನಾದವನಲ್ಲಿ ಪ್ರವೇಶಿಸಿ ಅವನಿಗೆ ಸಹ ಶಕ್ತಿ ಲಭಿಸಲಿ ಎಂಬ ಉದ್ದೇಶದಿಂದಾಗಿದೆ. ಎಂದರೆ ನಮಾಝ್ ಅನುಷ್ಠಿಸುವವರು ಒಬ್ಬರಿನ್ನೊಬ್ಬರಿಂದ ಶಕ್ತಿ ಪಡೆಯುತ್ತಾರೆ. ಈ **ವಹ್‌ದತೆ ಜಮ್‌ಹೂರಿ** (ಸಾರ್ವಜನಿಕ ಏಕತೆ) ಸ್ಥಾಪಿಸಲು ಆರಂಭದಲ್ಲಿ ಅಲ್ಲಾಹನು ಹೇಗೆ ಮಾಡಿರುವನೆಂದರೆ ಪ್ರತಿಯೊಂದು ಬಡಾವಣೆಯ ಮಸ್‌ಜಿದ್‌ಗಳಲ್ಲಿ ಐದು ಹೊತ್ತು ಸಾಮೂಹಿಕವಾಗಿ ನಮಾಝ್ ಮಾಡಬೇಕೆಂದು ಆಜ್ಞೆ ನೀಡಿರುವನು. ಇದರಿಂದ ಸ್ವಭಾವಗುಣಗಳ ವರ್ಗಾವಣೆ ಆಗುತ್ತದೆ. ಬಲಹೀನತೆ ದೂರ ಸರಿದು ಪರಸ್ಪರ ಪರಿಚಯ ಹೊಂದಿ ಪ್ರೀತಿ ಉಂಟಾಗುತ್ತದೆ. ಪರಿಚಯ ಗಳಿಸುವುದು ಬಹಳ ಉತ್ತಮವಾದುದಾಗಿದೆ. ಅದರಿಂದ ಪ್ರೀತಿ ವರ್ಧಿಸುತ್ತದೆ. ಅದು ಏಕತೆಯ ಅಸ್ತಿಭಾರವಾಗಿದೆ. ಆದುದರಿಂದ ಸಾಮೂಹಿಕವಾಗಿ ಅನುಷ್ಠಿಸುವ ನಮಾಝ್‌ನಿಂದ ವೈಯಕ್ತಿಕ ಲಾಭವಾಗುತ್ತದೆ ಮಾತ್ರವಲ್ಲ ಜಮಾಅತ್‌ಗೂ ಲಾಭ ಉಂಟಾಗುತ್ತದೆ. ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಬರದೆ ಇರುವವರು ಮತ್ತು ಕೆಲವರು ಮಸ್‌ಜಿದ್‌ಗೆ ಬಂದರೂ ಪರಸ್ಪರವಿರುವ ಅತೃಪ್ತಿಯನ್ನು ದೂರ ಸರಿಸುವುದಿಲ್ಲ ವಾದರೆ ಅಂತಹ ಜನರಿಗೆ ನಮಾಝ್ ಯಾವುದೇ ಲಾಭ ನೀಡುವುದಿಲ್ಲ. ಏಕೆಂದರೆ ನಮಾಝ್ ಅನುಷ್ಠಿಸುವ ಉದ್ದೇಶ ಆರಾಧನೆಯೊಂದಿಗೆ ಒಂದು ಐಕ್ಯತೆ ಉಂಟುಮಾಡುವುದಾಗಿದೆ. ಪರಸ್ಪರ ಪ್ರೀತಿ ಉಂಟು ಮಾಡುವುದಾಗಿದೆ. ಇವು ಅಂತಹ ಜನರಿಗೆ ಲಭಿಸುವುದಿಲ್ಲ. ಆದುದರಿಂದ ನಾವು ಈ ಯೋಚನೆ ಹೊಂದಿ ನಮ್ಮ ನಮಾಝುನ್ನು ಸಂರಕ್ಷಿಸಬೇಕು. ಈ ಯೋಚನೆ ಹೊಂದಿ ನಾವು ಮಸ್‌ಜಿದ್‌ಗೆ ಆಗಮಿಸಬೇಕು. ಆ ರೀತಿ ಮಾಡಿದರೆ ನಾವು ಅಲ್ಲಾಹನ ಸನ್ನಿಧಿಯಲ್ಲಿ ಅಂಗೀಕಾರಾರ್ಹವಾದ ನಮಾಝ್ ಅನುಷ್ಠಿಸುವವರಾಗುವೆವು ಮತ್ತು ಅಲ್ಲಾಹನ ಸಂಪ್ರೀತಿ ಗಳಿಸುವವರಾಗುವೆವು.

ನಮಾಝುನ್ನು ನಿಗದಿತ ಸಮಯದಲ್ಲಿ ಅನುಷ್ಠಿಸಲು ಸಾಧ್ಯವಾಗದ ಒಂದು ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಿದ್ದರು: ಒಮ್ಮೆ ಹಝ್ರತ್ ಮುಆವಿಯ ಸುಬ್‌ಹ್ ನಮಾಝ್ ಅನುಷ್ಠಿಸಲು ನಿಗದಿತವಾದ ಸಮಯ ದಾಟಿದ ನಂತರ ನಿದ್ರೆಯಿಂದ ಎಚ್ಚೆತ್ತರು. ಈ ಕಾರಣದಿಂದ ಅವರಿಗೆ ಬಹಳ ದುಃಖವಾಯಿತು. ಇಡೀ ದಿನ ಅದರ ಬಗ್ಗೆ ಚಿಂತಿಸುತ್ತಾ ಅಳುತ್ತಾ ಇದ್ದರು. ಮರುದಿನ ಅವರು ಸ್ವಪ್ನದಲ್ಲಿ ತನ್ನನ್ನು ಯಾರೋ ಸುಬ್‌ಹ್ ನಮಾಝ್‌ಗೋಸ್ಕರ ಎಬ್ಬಿಸುವುದಾಗಿ ಕಂಡರು. ಅವರು ಕೇಳಿದರು ನೀನು ಯಾರು? ಅವನು ಹೇಳಿದನು: ನಾನು ಶೈತಾನ್ ಆಗಿದ್ದೇನೆ. ನಿಮ್ಮನ್ನು ನಮಾಝ್‌ಗೆ ಎಬ್ಬಿಸಲು ಬಂದಿದ್ದೇನೆ. ಆಗ ಅವರು ಕೇಳಿದರು: ನಿನಗೆ ನಮಾಝ್‌ನೊಂದಿಗೆ ಏನು ಸಂಬಂಧವಿದೆ? ಶೈತಾನ್ ಹೇಳಿದನು: ನಿನ್ನೆ ನಾನು ನಿಮ್ಮನ್ನು ಸುಬ್‌ಹ್ ನಮಾಝ್‌ಗೆ ಏಳದಂತೆ ಮಾಡಿದ್ದೆ. ಆ ಕಾರಣದಿಂದ ನೀವು ಹಗಲಿಡೀ ರೋದಿಸುತ್ತಾ ಚಿಂತಿಸುತ್ತಾ ಇದ್ದಿರಿ. ಅಲ್ಲಾಹನು ಹೇಳಿದನು: ಅವರಿಗೆ ಸಾಮೂಹಿಕ ನಮಾಝ್‌ಗೆ ದೊರಕುವ ಪುಣ್ಯಕ್ಕಿಂತ ಹಲವು ಪಟ್ಟು ಹೆಚ್ಚಿಗೆ ಪುಣ್ಯ ನೀಡಿರಿ ಎಂದು. ನನಗೆ ಈ ಕಾರಣದಿಂದ ಬಹಳ ದುಃಖವಾಯಿತು. ನಿಮ್ಮನ್ನು ನಮಾಝ್‌ನಿಂದ ವಂಚಿತರನ್ನಾಗಿ ಮಾಡಿದ ಕಾರಣ ನಿಮಗೆ ಹೆಚ್ಚು ಪುಣ್ಯ ಲಭಿಸಿತು. ಈ ದಿನ ನಾನು ನಿಮ್ಮನ್ನು ಎಬ್ಬಿಸಲು ಬಂದಿರುವುದು ನಿಮಗೆ ಹೆಚ್ಚು ಪುಣ್ಯ ಲಭಿಸದಿರಲಿ ಎಂಬುದಕ್ಕಾಗಿದೆ ಎಂದು ಹೇಳಿದನು.

ಮನುಷ್ಯನು ಶೈತಾನನ ಮಾತನ್ನು ಮುರಿಯುವಾಗ ಶೈತಾನನು ಅವನನ್ನು ಬೆನ್ನಟ್ಟುವುದನ್ನು ಬಿಟ್ಟು ಬಿಡುತ್ತಾನೆ. ಅವನು ನಿರಾಶೆ ಹೊಂದಿ ದೂರ ಸರಿದು ಹೋಗುತ್ತಾನೆ. ಆದುದರಿಂದ ನಾವು ಯಾವಾಗಲೂ ಶೈತಾನನನ್ನು ನಿರಾಶೆ ಗೊಳಿಸಬೇಕು. ಮತ್ತು ಅಲ್ಲಾಹನ ಸಂಪ್ರೀತಿ ಪಡೆಯಲು ಸಾಧ್ಯವಿರುವಷ್ಟು ಪ್ರಯತ್ನ ಮಾಡಬೇಕು. ನಮ್ಮ ನಮಾಝ್‌ಗಳನ್ನು ಸಂರಕ್ಷಿಸಬೇಕು. ಮತ್ತು ಸಮಯಕ್ಕೆ ಸರಿಯಾಗಿ ನಮಾಝ್ ಅನುಷ್ಠಿಸಲು ಪ್ರಯತ್ನ ಮಾಡಬೇಕು.

ಕೆಲವು ಸಂದರ್ಭಗಳಲ್ಲಿ ಕೆಲವರು ಅವಸರ ಅವಸರವಾಗಿ ಮಾತನಾಡುತ್ತಾರೆ. ಒಂದು ವಿಷಯದ ಬಗ್ಗೆ ಗಾಢವಾಗಿ ಚಿಂತಿಸದೆ ಅಭಿಪ್ರಾಯ ಪ್ರಕಟಿಸುತ್ತಾರೆ. ಅವರ ಕಾರಣದಿಂದ ಕೆಲವು ಬಲಹೀನ ಪ್ರಕೃತಿಯ ಜನರು ದಾರಿ ತಪ್ಪುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಂದು ಸತ್ಕಾರ ಸಮಾರಂಭದಲ್ಲಿ ನಾನು ಒಬ್ಬ ವ್ಯಕ್ತಿಯನ್ನು ಎಡಗೈಯಿಂದ ನೀರು ಕುಡಿಯುದನ್ನು ತಡೆದೆನು. ನಾನು ಹೇಳಿದೆ– 'ಸರಿಯಾದ ಕಾರಣವಿಲ್ಲದಿದ್ದರೆ ಬಲಗೈಯಿಂದಲೇ ನೀರು ಕುಡಿಯಬೇಕು.' ಆಗ ವ್ಯಕ್ತಿ ಹೇಳಿದ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಡಗೈಯಿಂದ ನೀರು ಕುಡಿಯುತ್ತಿದ್ದರು ಎಂದು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಗೆ

ಮಾಡಲು ಒಂದು ಕಾರಣವಿತ್ತು. ಬಾಲ್ಯದಲ್ಲಿ ಅವರು ಬಿದ್ದಾಗ ಕೈಗೆ ಗಾಯವಾಗಿತ್ತು. ಕೈ ಎಷ್ಟು ಬಲಹೀನವಾಯಿತೆಂದರೆ ನೀರಿನ ಗ್ಲಾಸನ್ನು ಎತ್ತಿಕೊಳ್ಳಲು ಸಾಧ್ಯವಾಗುತ್ತಿದ್ದರೂ ಬಾಯಿ ತನಕ ಒಯ್ಯಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಸುನ್ನತನ್ನು ಅನುಸರಿಸಲು ಅವರು ಎಡಗೈಯಿಂದ ನೀರಿನ ಗ್ಲಾಸನ್ನು ಎತ್ತಿಕೊಂಡು ಗ್ಲಾಸಿನ ಕೆಳಗೆ ಬಲಗೈಯನ್ನು ಆಧಾರಾವಾಗಿ ಇಟ್ಟುಕೊಳ್ಳುತ್ತಿದ್ದರು. ಆದುದರಿಂದ ಯೋಚಿಸದೆ ಅವಸರದಿಂದ ನಿರ್ಧಾರ ಕೈಗೊಳ್ಳುವ ಕಾರಣದಿಂದ ನವೀನಾಚರಣೆಗಳು ತಲೆಯೆತ್ತುತ್ತವೆ. ತಪ್ಪು ವ್ಯಾಖ್ಯಾನ ನೀಡುವುದರಿಂದ ಜನರು ತಪ್ಪು ನಿರ್ಧಾರಗಳಿಗೆ ತಲಪುತ್ತಾರೆ.

**ತವಕ್ಕುಲ್** (ಅಲ್ಲಾಹನಲ್ಲಿ ಭರವಸೆ) ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಆಲಿಸಿದ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾ ಇದ್ದರು– ಸುಲ್ತಾನ್ ಅಬ್ದುಲ್ ಹಮೀದ್ ಖಾನರ ಒಂದು ಮಾತು ನನಗೆ ಬಹಳ ಮೆಚ್ಚುಗೆಯಾಗಿದೆ. ಗ್ರೀಸ್ ದೇಶದ ವಿರುದ್ಧ ಯುದ್ಧ ಮಾಡುವ ಬಗ್ಗೆ ಸುಲ್ತಾನ್ ಅಬ್ದುಲ್ ಹಮೀದ್ ಒಲವು ಹೊಂದಿದ್ದರು. ಆದರೆ ಮಂತ್ರಿಗಳಿಗೆ ಅದು ಇಷ್ಟವಿರಲಿಲ್ಲ. ಅವರು ಯುದ್ಧ ಮಾಡಬಾರದೆಂದು ಹಲವು ನೆವನಗಳನ್ನು ಹೇಳಿದರು. ಕೊನೆಗೆ ಮಂತ್ರಿಗಳು ಹೇಳಿದರು– ಯುದ್ಧ ಮಾಡಲು ಆ ವಸ್ತುಗಳು ಸಿದ್ಧವಾಗಿವೆ ಈ ವಸ್ತುಗಳು ಸಿದ್ಧವಾಗಿವೆ ಆದರೆ ಒಂದು ಮುಖ್ಯ ವಸ್ತುವಿನ ಬಗ್ಗೆ ಪ್ರಸ್ತಾಪಿಸುತ್ತಾ ಅದರ ಏರ್ಪಾಡು ಆಗಿಲ್ಲ ಎಂದರು. ಈ ರೀತಿ ಮಂತ್ರಿಗಳು ತಮ್ಮ ಸಲಹೆ ಹೇಳಿದಾಗ ಮತ್ತು ಕಷ್ಟಗಳನ್ನು ವಿವರಿಸಿದಾಗ ಸುಲ್ತಾನ್ ಅಬ್ದುಲ್ ಹಮೀದ್ ಹೇಳಿದರು: 'ಒಂದು ಸ್ಥಾನ ಅಲ್ಲಾಹನಿಗೂ ನೀಡಿರಿ' ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದೊರೆಯ ಈ ಮಾತು ಬಹಳ ಇಷ್ಟ ಪಡುತ್ತಿದ್ದರು. ಆದುದರಿಂದ ಸತ್ಯವಿಶ್ವಾಸಿಗಳು ತಮ್ಮ ಪ್ರಯತ್ನಗಳಲ್ಲಿ ಒಂದು ಪಾಲು ಅಲ್ಲಾಹನಿಗೂ ವಹಿಸಿ ಕೊಡಬೇಕಾದುದು ಆವಶ್ಯಕವಾಗಿದೆ. ಸಾಮಾನ್ಯವಾಗಿ ಯುವಕರಲ್ಲಿ ಈ ಪ್ರಶ್ನೆ ಉದಿಸುತ್ತಾ ಇರುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ದೇವನಿಂದ ದೂರ ಸರಿದ ಕಾರಣ ಪ್ರಾಯಶಃ ಅಭಿವೃದ್ಧಿ ಹೊಂದುತ್ತಿದ್ದಾರೆ ಎಂದು ಅವರಿಗೆ ತೋರುತ್ತದೆ. ಮುಸ್ಲಿಮರು ತಮ್ಮ ಧರ್ಮದ ಕಟ್ಟುಪಾಡುಗಳ ಕಾರಣ ಅವನತಿ ಹೊಂದುತ್ತಿದ್ದಾರೆ ಎಂದು ಅವರು ಯೋಚಿಸುತ್ತಾರೆ. ಆದರೆ ಯಥಾರ್ಥದಲ್ಲಿ ಮುಸ್ಲಿಮರು ತಮ್ಮ ಸೋಮಾರಿತನ ಮತ್ತು **ತವಕ್ಕುಲ್** (ಅಲ್ಲಾಹನಲ್ಲಿ ಭರವಸೆ) ಇದರ ತಪ್ಪು ಕಲ್ಪನೆಯ ಕಾರಣದಿಂದ ತಮ್ಮ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಅವರು ಬಲಹೀನತೆಗೆ ತುತ್ತಾಗಿದ್ದಾರೆ. ಏನಾದರೂ ಕೆಲಸ ಮಾಡುವುದಿದ್ದರೂ ಸಹ ಅದನ್ನು ತೀರಾ ತಪ್ಪು ರೀತಿಯಲ್ಲಿ ಮಾಡುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನದಲ್ಲೂ ಆಕಾಶದಲ್ಲಿ ನಿಮ್ಮ ಆಹಾರವಿದೆ. ನಿಮಗೆ ವಾಗ್ದಾನ ಮಾಡಲ್ಪಟ್ಟದ್ದು ಸಹ ಇದೆ ಎಂದು ಹೇಳಲಾಗಿದೆ. ಇದರಿಂದ ಒಬ್ಬ ಅವಿವೇಕಿ ತಪ್ಪು ಗ್ರಹಿಕೆ ಹೊಂದುತ್ತಾನೆ. ಅವನು ಲೌಕಿಕ ಪ್ರಯತ್ನಗಳನ್ನು ಬಿಟ್ಟುಬಿಡುತ್ತಾನೆ. ಅಲ್ಲಾಹನು ಹೇಳಿರುವನು: ನಿಮ್ಮ ಆಹಾರ ಆಕಾಶದಲ್ಲಿದೆ. ಆದುದರಿಂದ ನಿಮಗೆ ವಾಗ್ದಾನ ಮಾಡಲಾದುದು ನಿಮಗೆ ಸಿಗುವುದು, ಏನನ್ನೂ ಮಾಡಬೇಕಾದ ಆವಶ್ಯಕತೆ ಇಲ್ಲ. ಎಲ್ಲವನ್ನೂ ಅಲ್ಲಾಹನೇ ಕೊಡುವನು ಎಂದು ಯೋಚಿಸುತ್ತಾ ಸುಮ್ಮನಿದ್ದು ಬಿಡುತ್ತಾರೆ. ಆದರೆ ಪವಿತ್ರ ಖುರ್‌ಆನಿನ ಸೂರತುಲ್ ಜುಮುಅದಲ್ಲಿ ಅಲ್ಲಾಹನು ಹೇಳಿರುವನು– ನೀವು ಭೂಮಿಯಲ್ಲಿ ಚದುರಿ ಹೋಗಿ ಅಲ್ಲಾಹನ ಅನುಗ್ರಹವನ್ನು ಅನ್ವೇಷಿಸಿರಿ ಎಂದು. ಆದುದರಿಂದ ಅಲ್ಲಾಹನ ಅನುಗ್ರಹಗಳನ್ನು ಅನ್ವೇಷಿಸಬೇಕು. ಅದಕ್ಕೋಸ್ಕರ ಕಷ್ಟಪಡಬೇಕು. ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ಕೆಲವು ಜನರು ಕೇವಲ ಸಾಧನ ಸಂಪತ್ತುಗಳನ್ನು ಮಾತ್ರ ಅವಲಂಬಿಸಿಕೊಂಡು ತಪ್ಪು ಮಾಡುತ್ತಿದ್ದಾರೆ. ಇನ್ನು ಕೆಲವರು ಅಲ್ಲಾಹನು ನೀಡಿದ ಶಕ್ತಿ ಸಾಮರ್ಥ್ಯಗಳನ್ನು ನಿಷ್ಪ್ರಯೋಜಕ ಎಂದು ಭಾವಿಸಿ ಸುಮ್ಮನಿದ್ದು ಬಿಡುತ್ತಾರೆ. ಆದರೆ ನೋಡಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧಕ್ಕೆ ಹೊರಡುವಾಗ ಸಿದ್ಧತೆಗಳನ್ನು ಮಾಡುತ್ತಿದ್ದರು. ಕುದುರೆಗಳನ್ನೂ ಆಯುಧಗಳನ್ನೂ ತೆಗೆದುಕೊಂಡು ಹೋಗುತ್ತಿದ್ದರು. ಕೆಲವು ಸಾರಿ ಎರಡೆರಡು ಕವಚಗಳನ್ನು ಧರಿಸಿ ಹೋಗುತ್ತಿದ್ದರು. ಖಡ್ಗವನ್ನು ಸಹ ಸೊಂಟಕ್ಕೆ ಸಿಲುಕಿಸುತ್ತಿದ್ದರು. ಆದರೆ ಅಲ್ಲಾಹನು ಅವರಿಗೆ ವಾಗ್ದಾನ ನೀಡಿದ್ದನು: ಜನರ ಆಕ್ರಮಣದಿಂದ ನಿನ್ನನ್ನು ರಕ್ಷಿಸುವೆನು ಎಂದು. ಆದುದರಿಂದ ಮನುಷ್ಯನು ಪೂರ್ಣವಾಗಿ ಪ್ರಯತ್ನ ಮಾಡಿ ಅನಂತರ ಅಲ್ಲಾಹನ ಮೇಲೆ ಭರವಸೆ ಇಡಬೇಕೆಂದು ಆಜ್ಞೆ ನೀಡಲಾಗಿದೆ. ಇದೇರೀತಿ ಪ್ರತಿಯೊಂದು ವಿಷಯದ ಬಗ್ಗೆ ಕಷ್ಟಪಟ್ಟು ಪ್ರಯತ್ನಿಸಿ ಅನಂತರ ಅಲ್ಲಾಹನ ಮೇಲೆ ಭರವಸೆ ಇಡುವ ಆಜ್ಞೆ ನೀಡಲಾಗಿದೆ. ಹೀಗೆ ಮಾಡದೆ ಅಲ್ಲಾಹನ ಸಹಾಯ ಲಭಿಸಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಂಡ **ಬಾದ್‌ಶಾಹ್ ತೇರೇ ಕಪ್‌ಡೋಂಸೆ ಬರ್‌ಕತ್ ಡೂಂಡೇಂಗೆ** (ದೊರೆಗಳು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಅನ್ವೇಷಿಸುವರು) ಎಂಬ ಇಲ್‌ಹಾಮ್‌ಗೆ ಒಂದು ಸುಂದರ ವಿವರಣೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ನೀಡಿದ್ದಾರೆ: ಅವರು ಹೀಗೆ ಹೇಳಿದ್ದಾರೆ– ದೊರೆಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಟ್ಟೆಗಳಿಂದ ಅನುಗ್ರಹ ಅನ್ವೇಷಿಸುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರಿಂದಲೂ ಅವರ ನಂತರದವರಿಂದಲೂ ಅವರ ಆಧ್ಯಾತ್ಮಿಕ ಪದವಿಗೆ ಅನುಸಾರವಾಗಿ ಅನುಗ್ರಹ ಗಳಿಸುವರು. ಆದುದರಿಂದ ನೀವು ಪ್ರಾರ್ಥಿಸುತ್ತಾ ಇರಬೇಕು. ಶಕ್ತಿ ಗಳಿಸಿದ ನಂತರ ನೀವು ದೌರ್ಜನ್ಯ ಮಾಡುವವರಾಗಬಾರದು. ನೀವು ಸಂತೋಷ ಪ್ರಕಟಿಸುವುದರ ಜೊತೆಗೆ ಇಸ್ತಿಗ್‌ಫಾರ್ ಪ್ರಾರ್ಥನೆ ಸಹ ಮಾಡಿರಿ. ನೀವು ನಿಮಗೋಸ್ಕರ ಮತ್ತು ಅನ್ಯರಿಗೋಸ್ಕರವೂ ಪ್ರಾರ್ಥಿಸಿರಿ. (ಇದು ಆವಶ್ಯಕವಾಗಿ ಗಮನಿಸಬೇಕಾದ ವಿಷಯವಾಗಿದೆ. ನಾವು ಈಗ ಶಾಂತಿ ಮತ್ತು ಸಂರಕ್ಷಣೆಯ ಮಾತುಗಳನ್ನು ಹೇಳುತ್ತಿದ್ದೇವೆ. ಅದನ್ನು ನಾವು ಹರಡುತ್ತಾ ಇರಬೇಕು. ವಿಜಯದ ಆ ಕಾಲದಲ್ಲಿಯೂ ನಾವು ಶಾಂತಿ ಮತ್ತು ಪ್ರೀತಿಯನ್ನು ಹರಡುತ್ತಾ ಇರಬೇಕು. ಇಲ್ಲದಿದ್ದರೆ ನಾವು ಈಗ ಶಾಂತಿಯ ಬಗ್ಗೆ, ಪ್ರೀತಿಯ ಬಗ್ಗೆ ಮಾತನಾಡುವುದು ಕೇವಲ ನಮ್ಮ ಬಲಹೀನತೆಯ ಕಾರಣ ಎಂದು ಗಣಿಸಲ್ಪಡುವುದು.)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮುಂದುವರಿಸಿ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್ ಈಡೇರುವ ಕಾಲ ದೂರವಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಟ್ಟೆಗಳಿಂದ ಅನುಗ್ರಹ ಅನ್ವೇಷಿಸುವವರು ಉಂಟಾಗಬೇಕಾದರೆ ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳಿಂದ ಅನುಗ್ರಹ ಅನ್ವೇಷಿಸಲು ಪ್ರಾರಂಭಿಸಬೇಕು. ಆಗ ಅಲ್ಲಾಹನು ಎಂತಹ ವ್ಯವಸ್ಥೆ ಮಾಡುವನೆಂದರೆ ಜನರು ಅವರ ಬಟ್ಟೆಗಳಿಂದ ಅನುಗ್ರಹ ಅನ್ವೇಷಿಸುವರು. ತಬ್ಲೀಗ್ ವಿಶಾಲವಾಗಿ ಹರಡುವಾಗ ದೊರೆಗಳು ಆಗಮಿಸುವರು. ಅವರು ಬಟ್ಟೆಗಳಿಂದ ಅನುಗ್ರಹ ಅನ್ವೇಷಿಸಲು ಪ್ರಯತ್ನಿಸುವರು. (ಅನಂತರ ಹುಝೂರ್ ತಬರ್ರುಕ್‌ಗಳನ್ನು ರಕ್ಷಿಸಿಡುವ ಬಗ್ಗೆ ಮಾರ್ಗದರ್ಶನ ನೀಡಿದರು).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಗೆ ಗ್ರಂಥಗಳ ಪ್ರಕಟಣೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು ಎಂಬ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸುಂದರ ಕೈ ಬರಹವನ್ನು ಮೆಚ್ಚುತ್ತಿದ್ದರು. ಮತ್ತು ಅಕ್ಷರದ ಸೌಂದರ್ಯದ ಮಟ್ಟವನ್ನು ಉತ್ತಮ ಪಡಿಸಲು ಪ್ರಯತ್ನಿಸುತ್ತಿದ್ದರು. ಸಾಮಾನ್ಯ ಬರಹಗಾರರಿಂದ ಪುಸ್ತಕದ ಅಕ್ಷರಗಳನ್ನು ಬರೆಯಿಸಿ

ಪುಸ್ತಕವನ್ನು ಅಂದಗೆಡಿಸಲು ಅವರು ಇಚ್ಛಿಸುತ್ತಿರಲಿಲ್ಲ. ಪುಸ್ತಕದ ಉರ್ದು ಬರಹ ಸುಂದರವಾಗಿಲ್ಲವಾದರೆ ಪುಸ್ತಕದ ಬಗ್ಗೆ ಜನರ ಅಭಿಪ್ರಾಯ ಸಹ ಕಡಿಮೆ ಮಟ್ಟದ್ದಾಗುವುದೆಂದು ಅವರು ಭಾವಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಮ್ಮ ಗ್ರಂಥಗಳ ಮುದ್ರಣದ ಬಗ್ಗೆ ವಿಶಿಷ್ಟ ಚಿಂತೆ ಇತ್ತು. ಅವರು ಇಸ್ಲಾಮಿನ ವಿರೋಧಿಗಳನ್ನು ಪ್ರತಿರೋಧಿಸಲು ಸುಂದರವಾದ ಅಕ್ಷರಗಳಲ್ಲಿ ಬರೆದು ಪುಸ್ತಕಗಳನ್ನು ಪ್ರಕಟಿಸಿ ಇಸ್ಲಾಮಿನ ಒಳಿತು ಮತ್ತು ಸೌಂದರ್ಯವನ್ನು ಅನ್ಯರಿಗೆ ಮಾತ್ರವಲ್ಲ ನಮ್ಮವರ ಜ್ಞಾನದಲ್ಲೂ ವರ್ಧನೆ ಉಂಟಾಗಲಿ ಎಂದು ಬಯಸುತ್ತಿದ್ದರು.

ಒಟ್ಟಿನಲ್ಲಿ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಲು ವಿಶಿಷ್ಟವಾಗಿ ಪ್ರಯತ್ನಿಸಬೇಕು. ಅದರಿಂದ ನಮ್ಮ ಧಾರ್ಮಿಕ ಜ್ಞಾನ ವರ್ಧಿಸುವುದು ಮಾತ್ರವಲ್ಲ ನಮ್ಮಲ್ಲಿ ತಬ್ಲೀಗ್ ಮಾಡುವ ಉತ್ಸಾಹ ಕೂಡ ವರ್ಧಿಸುವುದು. ನಮ್ಮ ಜ್ಞಾನದಲ್ಲಿ ಅನುಗ್ರಹ ಸಹ ಉಂಟಾಗುವುದು. ನಾವು ಆಗ ಲೋಕವನ್ನು ಇಸ್ಲಾಮಿನ ಶಾಂತಿ ಪತಾಕೆಯ ಕೆಳಗೆ ತರಲು ಶಕ್ತರಾಗುವೆವು. ಆದುದರಿಂದ ಯುವ ಜನರು ಸಹ ಈ ವಿಷಯದ ಬಗ್ಗೆ ಗಮನ ಹರಿಸಬೇಕು. ಆಗ ಮಾತ್ರ ದೊರೆಗಳು ನಿನ್ನ ಬಟ್ಟೆಗಳಿಂದ ಅನುಗ್ರಹ ಅನ್ವೇಷಿಸುವರು ಎಂಬ ಇಲ್‌ಹಾಮ್ ಸಾಕಾರಗೊಳ್ಳುವುದು ಮತ್ತು ನಮಗೆ ಅದರ ಅರ್ಥ ತಿಳಿಯುವುದು. ಆಗ ಮಾತ್ರ ನಾವು ತಬ್ಲೀಗಿನ ಉನ್ನತ ಮಟ್ಟ ಸ್ಥಾಪಿಸ ಬಲ್ಲೆವು. ಈ ವಿಷಯ ಮನವರಿಕೆ ಮಾಡುವ ಭಾಗ್ಯವನ್ನು ಅಲ್ಲಾಹನು ನಮಗೆಲ್ಲರಿಗೂ ನೀಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಮೂವರು ಮೃತರ ಸದ್ಗುಣಗಳನ್ನು ವಿವರಿಸಿ ಅವರ ಪರವಾಗಿ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವುದಾಗಿ ಪ್ರಕಟಿಸಿದರು. ಆ ಮೂವರು ಮೃತರು: 1) ಚೌಧರಿ ಅಬ್ದುಲ್ ಅಝೀಝ್ ಸಾಹಿಬ್ ಡೋಗರ್ ರಬ್ವ. 2) ಇಖ್‌ಬಾಲ್ ನಸೀಮ್ ಅಝ್‌ಮತ್ ಬಟ್ ಸಾಹಿಬ, ಗುಲಾಮ್ ಸರ್‌ವರ್ ಸಾಹೇಬ್ ಬಟ್‌ರವರ ಪತ್ನಿ. 3) ಮರ್‌ಯಮ್ ಸಿದ್ದೀಖ ಸಾಹಿಬ, ಖುರೈಶಿ ಮುಹಮ್ಮದ್ ಶಫೀ ಆಬಿದ್ ಸಾಹಿಬ್ ದರ್‌ವೇಶರ ಪತ್ನಿ.)

————————————*****————————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 15-01-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon